ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್: ತಾವು ದಯಮಾಡಿ ಆ ರೀತಿ ಮಾತನಾಡಬೇಡಿ. ಯಾವುದೇ ಕಾರ್ಯಕ್ರಮಕ್ಕೆ ನಾನು ಒಪ್ಪಿಕೊಂಡ ಮೇಲೆ ತಪ್ಪಿಸುವುದಿಲ್ಲ. ಅನಿವಾರ್ಯದಿಂದ ಅದಕ್ಕೆ ಬರಲು ಆಗಲಿಲ್ಲ. ಅನಿವಾರ್ಯವಾಗಿ ಒಮ್ಮೊಮ್ಮೆ ಆ ರೀತಿಯಾಗುತ್ತದೆ.

ಖ) ಮುರುಡೇಶ್ವರ ಸೀಫುಡ್ ಕಾರ್ಖಾನೆ ಮುಚ್ಚಿರುವುದು.

ಡಾ: ಎಂ.ಪಿ.ಕರ್ಕಿ (ಕುಮಟಾ): ಮಾನ್ಯ ಅಧ್ಯಕ್ಷರೆ, ಪ್ರತಿಷ್ಠಿತ ಮುರುಡೇಶ್ವರ ಸೀಫುಡ್ ಕಾರ್ಖಾನೆ ಅನಿವಾರ್ಯ ಕಾರಣಗಳಿಂದ ಕಳೆದ ಮೂರು ವರ್ಷಗಳಿಂದ ಮುಚ್ಚಿದ್ದಾರೆ. ಅಲ್ಲಿನ ಖಾಯಂ ನೌಕರರು ಪರಿಹಾರಕ್ಕಾಗಿ ಹೋರಾಟವನ್ನು ನಡೆಸಿದರು. ಮಾಲೀಕರು ಮತ್ತು ಕಾರ್ಮಿಕರ ನಡುವೆ ಅಧಿಕಾರಿಗಳ ಸಮಕ್ಷಮ ಸಂಧಾನವಾಗಿ, 4.6.1997ರ ಆ ಸಭೆಯಲ್ಲಿ 22 ಲಕ್ಷದ 79 ಸಾವಿರ ಹಣವನ್ನು ಕೊಡಬೇಕೆಂದು ತೀರ್ಮಾನವಾಗಿರುತ್ತದೆ. ಅದರಂತೆ 16-3-98ರಂದು ಬಡ್ಡಿ ಸಮೇತ 22 ಲಕ್ಷದ 79 ಸಾವಿರದ 52 ರೂಪಾಯಿಗಳನ್ನು ಮಾಲೀಕರು, ಬೆಳಗಾಂ ವಿಭಾಗದ ಲೇಬರ್ ಕಮೀಷನ್‌ರವರ ಖಾತೆಗೆ ಜಮಾ ಮಾಡಿದ್ದಾರೆ. ಎರಡೂವರೆ ತಿಂಗಳುಗಳಾದರೂ ಕಾರ್ಮಿಕರಿಗೆ ಹಣ ಸಂದಾಯವಾಗಿಲ್ಲ. ಅಧಿಕಾರಿಗಳು ಮತ್ತು ಕಾರ್ಮಿಕರು ಕೂಡಿ ಇದಕ್ಕೆ 15 ಪರ್‌ಸೆಂಟ್ ಹಣವನ್ನು ಸೇರಿಸಿಕೊಡಬೇಕೆಂದು ದೂರಿದ್ದಾರೆ. ಕೂಡಲೇ ಕಾರ್ಮಿಕರಿಗೆ ಹಣ ಪಾವತಿಯಾಗಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಸತ್ಯನಾರಾಯಣ್ (ಕಾರ್ಮಿಕ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರೇನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಬೆಳಗಾಂ ವಿಭಾಗದ ಡೆಪ್ಯೂಟಿ ಕಮೀಷನ್‌ರವರಿಂದ ವರದಿಯನ್ನು ತರಿಸಿಕೊಂಡು ಬೇಗನೆ ಹಣವನ್ನು ಪಾವತಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಗ) ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಭಾರಿ ಮಳೆಯಿಂದ ಬೆಳೆ ಹಾನಿಯಾಗಿರುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಇತ್ತೀಚೆಗೆ ಬಹಳ ಗಾಳಿ ಬೀಸಿ, ದೊಡ್ಡ ಪ್ರಮಾಣದಲ್ಲಿ ಆಲಿಕಲ್ಲುಗಳು ಬಿದ್ದು ಸಹಸ್ರಾರು ತೆಂಗಿನ, ಅಡಿಕೆ, ಬಾಳೆ ಮರಗಳು ನಾಶವಾಗಿದೆ. ಬಾಳೆ ಬೆಳೆಗೆ ಬಹಳ ನಾಶವಾಗಿದೆ. ಹೋದ ವರ್ಷ ಇದೇ ಕಾಲದಲ್ಲಿ ನನ್ನ ಕ್ಷೇತ್ರದ ಅಂದನಕೆರೆ ಹೋಬಳಿಯಲ್ಲಿ ಇದೇ ರೀತಿ 2-3 ಸಾವಿರ ತೆಂಗಿನ ಮರಗಳು ನಾಶವಾಗಿ ರೈತರು ಕಂಗಾಲಾಗಿದ್ದರು. ಈ ವರ್ಷ ಸಹ ಇದೇ ಪರಿಸ್ಥಿತಿ ನಿರ್ಮಾಣವಾಗಿದೆ. ಘನ ಸರ್ಕಾರದವರು ಇವರಿಗೆ ತಾತ್ಕಾಲಿಕವಾಗಿ ಏನಾದರೂ ಪರಿಹಾರ ಕೊಡುವ ವ್ಯವಸ್ಥೆ ಮಾಡಬೇಕು. ಏತಕ್ಕಾಗಿ ಈ ಭಾಗದಲ್ಲಿ ಈ ರೀತಿಯಾಗುತ್ತದೆ ಎಂಬ ಬಗ್ಗೆ ಅವಲೋಕನ ನಡೆಸಬೇಕು. ಏಪ್ರಿಲ್,

ಮೇ ತಿಂಗಳಿನಲ್ಲಿ ಗಾಳಿ ಪ್ರಾರಂಭವಾಗಿಬಿಟ್ಟರೆ ಏನಾಗುತ್ತದೋ ಎಂಬ ಭೀತಿ ನಮ್ಮ ಕಡೆ ಬಂದು ಬಿಡುತ್ತದೆ. ಅದಕ್ಕೆ ಉತ್ತರವನ್ನು ಹೇಳುವ ಸ್ಥಿತಿಯನ್ನು ನಿರ್ಮಾಣ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಇಂದೇ ಮಾಡಿಸುತ್ತೇನೆ. ಇವತ್ತೇ ಉಪನಿರ್ದೇಶಕರು, ತುಮಕೂರು ಮತ್ತು ಸಂಬಂಧಪಟ್ಟ ಡಿ.ಸಿ.ಯವರನ್ನು ಕಳುಹಿಸಿ ಅಲ್ಲಿ ಏನೇನು ತೆಂಗಿನ, ಅಡಿಕೆ, ಬಾಳೆ ಮರಗಳ ನಾಶವಾಗಿದೆ ಅದರ ಬಗ್ಗೆ ವರದಿ ತರಿಸುತ್ತೇನೆ. ಅದಕ್ಕೆ ಪರಿಹಾರವನ್ನು ಕೊಡಲು ಇಲಾಖೆಯಲ್ಲಿ ಅವಕಾಶವಿದೆ. ಎಷ್ಟು ಪರಿಹಾರವನ್ನು ಕೊಡಬೇಕು ಎಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಛ) ಚಿಕ್ಕಮಗಳೂರು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕಿನ ಕೆ.ಎನ್.ಸುಬ್ಬರಾವ್ ಎನ್ನತಕ್ಕ ಗುಮಾಸ್ತನ ಸತ್ಯಾಗ್ರಹ.

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ನ ಕೆ.ಎನ್.ಸುಬ್ಬರಾವ್ ಎನ್ನತಕ್ಕ ಒಬ್ಬ ಗುಮಾಸ್ತ ಕಳೆದ ಹತ್ತು ಹನ್ನೆರಡು ದಿವಸದಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಸರ್ಕಾರದವರು ಮತ್ತು ಅಲ್ಲಿನ ಆಡಳಿತ ಮಂಡಳಿಯವರು ಅವರ ಬಗ್ಗೆ ಏನನ್ನೂ ಇದುವರೆಗೆ ಕೇಳಿಲ್ಲ. ಅವನು ಹಣವನ್ನು ದುರುಪಯೋಗ ಮಾಡಿದ್ದಾನೆ ಎನ್ನತಕ್ಕ ಕಾರಣದ ಮೇಲೆ ಕೆಲಸದಿಂದ ವಜಾ ಮಾಡಿದ್ದಾರೆ. ನನಗೆ ಸಿಗತಕ್ಕ ಸೌಲಭ್ಯಗಳನ್ನು ಕೊಟ್ಟರೆ ಸಾಕು ಎಂದು ಆ ವ್ಯಕ್ತಿ ಬೇಡಿಕೆಯನ್ನಿಟ್ಟು ಸತ್ಯಾಗ್ರಹ ಮಾಡುತ್ತಿದ್ದಾನೆ. ಇದುವರೆಗೆ ಅವನ ಬಗ್ಗೆ ಯಾರೂ ವಿಚಾರಣೆ ಮಾಡಿಲ್ಲ. ಆದ್ದರಿಂದ ಇದರ ಬಗ್ಗೆ ಸೂಕ್ತ ನಿರ್ದೇಶನವನ್ನು ಜಿಲ್ಲಾ ಸಹಕಾರಿ ಬ್ಯಾಂಕ್‌ನ ಆಡಳಿತ ಮಂಡಳಿಯವರಿಗೆ ಮಾನ್ಯ ಸಚಿವರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವ ವಿಚಾರದ ಬಗ್ಗೆ ಸಂಬಂಧಪಟ್ಟ ಸಚಿವರ ಜೊತೆ ಚರ್ಚೆ ಮಾಡಿ ಸೂಕ್ತ ಪರಿಹಾರವನ್ನು ಒದಗಿಸಿಕೊಡುತ್ತೇವೆ.

ಜ) ಸಣ್ಣ ಉಳಿತಾಯ ಯೋಜನೆಗೆ ಪ್ರೋತ್ಸಾಹ ಧನ ನೀಡದೇ ಇರುವುದು.

ಶ್ರೀ ಕೆ.ಜಯರಾಮ್ ಶೆಟ್ಟಿ (ಉಳ್ಳಾಲ): ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರದ ಸಣ್ಣ ಉಳಿತಾಯ ಯೋಜನೆಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಇತ್ತೀಚೆಗೆ ಸಣ್ಣ ಉಳಿತಾಯ ಖಾತೆದಾರರು ಐದು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಡಿಪಾಸಿಟ್ ಮಾಡಿದರೆ ಅವರಿಗೆ ತಕ್ಷಣ ಎರಡು ಪರ್‌ಸೆಂಟ್ ಇನ್‌ಸೆನ್‌ಟೀವ್